

ಬಂದಾನೋ...! ಆದೀಶನ ಜತೆ ನನ್ನ ಮದುವೆ ಮಾಡಲು ತಾತ ಎಷ್ಟು ಕಷ್ಟ ಎದುರಿಸಬೇಕೋ...! ಚಿಂತಿಸುತ್ತಿದ್ದಾಗ ಶಿವಗೀತಾಳ ಕಣ್ಣೀರು ಇಳಿದವು. ಬಿದ್ದ ಕಣ್ಣೀರು ಬಿಂದುವಾಗಿ ಕುಂತುದ್ದು ಕಂಡಿತು. ಶಿವಗೀತ ಅಚ್ಚರಿಯಿಂದ ಅದನ್ನೇ ದಿಟ್ಟಿಸಿ ನೋಡುತ್ತ ಮೈಮರೆತಳು. ಟುಬುಕ್... ಟುಬುಕ್... ಟುಬುಕ್... ಕಣ್ಣೀರ ಹನಿಗಳು ಕೆಳಗೆ ಬಿದ್ದು ಬಿಂದುವಾಗಿ ಕುಂತು ಹೊಳೆಯತೊಡಗಿದವು. ಅವು ತನ್ನ ಮುಂದೆ ಎಡ-ಬಲಕ್ಕೆ ನಿಚ್ಚಳವಾಗಿ ಕಂಡವು. ಆ ಬಿಂದುಗಳಲ್ಲಿ ಹೆಣ್ಣುಮಕ್ಕಳ ಮುಖ ಮೂಡಿದವು. ತನ್ನ ಕಣ್ಣೀರ ಬಿಂದುವಿನಲ್ಲಿಯೂ ತನ್ನ ಮುಖ ಮೂಡಿ ಹೊಳೆಯುತ್ತಿತ್ತು! ಮೆಲ್ಲಕ ಆ ಬಿಂದುಗಳು ಒಡೆದು ಹೆಣ್ಣುಮಕ್ಕಳು ಕಾಣಿಸಿದರು. ತನ್ನನ್ನು ಸುತ್ತುವರಿದರು.

'ತಂಗೀ ಶಿವಗೀತ, ನಾವೆಲ್ಲ ನಿನ್ನ ಅಕ್ಕತಂಗಿಯರು' ಎಂದು ಕೈಚಾಚಿದರು. ಶಿವಗೀತ ಎರಡೂ ಕೈ ಚಾಚಿದಳು. ಅವರೆಲ್ಲ ಹಿಡಿದರು. ಎಲ್ಲರೂ ಎದ್ದು ನಿಂತರು. 'ತಂಗೀ ಶಿವಗೀತಾ, ನಿನ್ನ ಕಣ್ಣೀರೇ ನಮ್ಮ ಕಣ್ಣೀರೂ ಹೌದವ್ವ. ಇಂದು ನಾವೆಲ್ಲ ಅಣ್ಣ ಬಸವಣ್ಣನ ಅನುಭವ ಮಂಟಪಕ್ಕೆ ಹೋಗನು. ನಮಗ ನ್ಯಾಯಬೇಕು ಎಂದು ಅಣ್ಣನಿಗೆ ಮನವಿ ಸಲ್ಲಿಸೋಣ ಬಾ' ಎಂದು ಕರೆದುಕೊಂಡು ನಡೆದರು. ಶಿವಗೀತಾಗೆ ತನ್ನನ್ನೂ ಸೇರಿ ಎಲ್ಲರೂ ಬೆಳಗುವ ದೀವಿಗೆಯಾಗಿ ನಡೆಯುತ್ತಿದ್ದಂತೆ ಅನ್ನಿಸಿತು.

ಅನುಭವ ಮಂಟಪದ ಪ್ರವೇಶ ದ್ವಾರದಲ್ಲಿ ಶರಣ-ಶರಣೆಯರು ಗುಂಪು ಗುಂಪಾಗಿ ಏನೇನೋ ಚರ್ಚೆ ಮಾಡುತ್ತ ನಿಂತಿದ್ದರು. ಅವರೆಲ್ಲ ನಡೆಯುತ್ತ ಬಂದ ದೀವಿಗೆಗಳಿಗೆ ದಾರಿ ಬಿಟ್ಟರು. 'ಅಕ್ಕಂದಿರಿಗೆ ಶರಣು ಶರಣಾರ್ಥಿ' ಎಂದು ಬರಮಾಡಿಕೊಂಡರು. ಒಳ ಪ್ರವೇಶಿಸಿದರೆ ಎಡ-ಬಲ ದೊಡ್ಡ ದೊಡ್ಡ ಪಡಸಾಲೆಯಂಥ ಮಂಟಪಗಳು. ಶರಣರು-ಶರಣೆಯರು ಬೇರೆ ಬೇರೆ ಕುಂತಿರಲಿಲ್ಲ. ಕೂಡಿಯೇ ಕುಂತಿದ್ದರು. ಅವರ ಮಾತುಗಳು ವಚನಗಳೇ ಆಗಿದ್ದವು. ವಚನಗಳನ್ನು ಕೇಳುತ್ತ ತಾತ ಇಲ್ಲೇ ಎಲ್ಲೋ ಇದ್ದಾನೆಂದು ತಿಳಿದಳು. ಹಾಗೆ ಮುಂದೆ ಮುಂದೆ ನಡೆದ ದೀವಿಗೆಗಳು ಎದುರಿಗೆ ಮಂಟಪ ಬಂದಾಗ ನಿಂತು, ಬಲ ಭಾಗದ ಮಂಟಪ ಸೇರಿದರು.

'ಇಂದಿನ ಅನುಭಮಂಟಪಕ್ಕೆ ಬಂದ ಶರಣ-ಶರಣೆಯರಿಗೆ ಶರಣು ಶರಣಾರ್ಥಿ. ಅಣ್ಣ, ಅಲ್ಲಮದೇವ್ರು ಬಂದು ಆಸೀನರಾಗಿದ್ದಾರೆ. ಕಲಾಪಗಳು ಆರಂಭವಾಗಲಿ' ಚೆನ್ನಬಸವಣ್ಣ ಎದುರಿನ ವೇದಿಕೆಯಲ್ಲಿ ಕಾಣಿಸಿಕೊಂಡು ಹೇಳಿ ಮರೆಯಾದ. 'ಇಂದು ಎರಡು



